ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

(31)

ಇಲಾಖೆ / ವಿಷಯ : DEPARTMENT / SUBJECT: 

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ     ದಿನಾಂಕ : DATE : 23/12/20

# ವಿಶೇಷ ಅಧಿವೇಶನಕ್ಕೆ ನಕಾರ

ಪ್ರ. ವಾ. 23-12-20

## ಕಾಯ್ದೆ ವಿರೋಧಿಸಿ ನಿರ್ಣಯಕ್ಕೆ ಮುಂದಾಗಿದ್ದ ಸರ್ಕಾರ

ತಿರುವನಂತಪುರ (ಪಿಟಿಐ): ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ನಿರ್ಣಯ ಅಂಗೀಕರಿಸುವುದಕ್ಕಾಗಿ ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಲು ಕೇರಳ ರಾಜ್ಯಪಾಲರು ಒಪ್ಪಿಲ್ಲ. 'ಅಧಿವೇಶನ ಕರೆಯುವ ತುರ್ತು ಏನಿದೆ?' ಎಂದು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಮುಖ್ಯಮಂತ್ರಿ ಅವರಿಂದ ವಿವರಣೆ ಕೇಳಿದ್ದಾರೆ.

ಅಧಿವೇಶನ ಕರೆಯಲು ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಆದರೆ ರಾಜ್ಯಪಾಲರು ಒಪ್ಪದ ಕಾರಣ ಬುಧವಾರ ಅಧಿವೇಶನ ನಡೆಯುತ್ತಿಲ್ಲ ಎಂದು ಸರ್ಕಾರದ ಮೂಲಗಳು ಸ್ಪಷ್ಟಪಡಿಸಿವೆ. ಈ ಮಧ್ಯೆ, ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿ ಕೇರಳದ ಪ್ರತಿಪಕ್ಷ ಮೈತ್ರಿಕೂಟ ಯುಡಿಎಫ್‌ನ ಸದಸ್ಯರು ಮಂಗಳವಾರ ರಾಜಭವನ ಚಲೊ ನಡೆಸಿದರು. ಮುಖಂಡರಾದ ರಮೇಶ್ ಚೆನ್ನಿತ್ತಲ, ಉಮ್ಮನ್ ಚಾಂಡಿ ಮೊದಲಾದವರು ಧರಣಿಯಲ್ಲಿ ಪಾಲ್ಗೊಂಡಿದ್ದರು.

**ಖಟ್ಟರ್‌ಗೆ ಕಪ್ಪು ಬಾವುಟ:** ಹರಿಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಅವರಿಗೆ ಪ್ರತಿಭಟನಾನಿರತ ರೈತರು ಅಂಬಾಲದಲ್ಲಿ ಮಂಗಳವಾರ ಕಪ್ಪು ಬಾವುಟ ಪ್ರದರ್ಶಿಸಿದ್ದಾರೆ.

ಅಂಬಾಲ ಮಾರ್ಗವಾಗಿ ಸಂಚರಿಸುತ್ತಿದ್ದ ಖಟ್ಟರ್ ಅವರ ಬೆಂಗಾವಲು ಪಡೆಯನ್ನು ತಡೆಯಲು ಯತ್ನಿಸಿದ ರೈತರ ಗುಂಪು, ಕಪ್ಪು ಬಟ್ಟೆ ಪ್ರದರ್ಶಿಸಿ ಘೋಷಣೆಗಳನ್ನು ಕೂಗಿತು. ಬಿಗಿ ಬಂದೋಬಸ್ತ್ ಇದ್ದುದರಿಂದ ವಾಹನಗಳನ್ನು ತಡೆಯಲು ಆಗಲಿಲ್ಲ.

**ಯೂಟ್ಯೂಬ್ ಚಾನಲ್:** ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ತಮ್ಮ ನಡುವೆ ಮಾಹಿತಿ ಪ್ರಸಾರಕ್ಕಾಗಿ ಪ್ರತ್ಯೇಕ ಯೂಟ್ಯೂಬ್ ಚಾನಲ್ ಆರಂಭಿಸಿದ್ದಾರೆ. 'ಕಿಸಾನ್ ಏಕತಾ ಮೋರ್ಚಾ' ಹೆಸರಿನ ಚಾನಲ್‌ನಲ್ಲಿ ರೈತ ಹೋರಾಟದ ಪ್ರತಿ ಮಾಹಿತಿಯೂ ಪ್ರಸಾರವಾಗಲಿದೆ. ರೈತರ ನಿರ್ಣಯಗಳು, ಸರ್ಕಾರದ ಪ್ರಸ್ತಾವನೆ, ಸಂವಾದಗಳು, ಚರ್ಚೆಗಳು, ನಿಲುವುಗಳನ್ನು ಚಾನಲ್ ವರದಿ ಮಾಡಲಿದೆ.



ದೆಹಲಿಯ ಗಾಜಿಪುರ ಗಡಿಯ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ಮಂಗಳವಾರ ರಸ್ತೆ ತಡೆ ನಡೆಸಲಾಯಿತು     ಪಿಟಿಐ ಚಿತ್ರ

### ಮಧ್ಯಾಹ್ನದ ಊಟ ತ್ಯಾಗ

**ದೆಹಲಿಯಲ್ಲಿ ರೈತರ ಪ್ರತಿಭಟನೆಯನ್ನು ಬೆಂಬಲಿಸಿ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ವಿನೂತನ ಪ್ರತಿಭಟನೆ ಹಮ್ಮಿಕೊಂಡಿದೆ. ಡಿ. 23ರಂದು 'ಮಧ್ಯಾಹ್ನದ ಊಟ ತ್ಯಜಿಸುವ' ಮೂಲಕ ಹೋರಾಟಕ್ಕೆ ಬೆಂಬಲ ಸೂಚಿಸಿದೆ. 'ಕೇಂದ್ರ ಸರ್ಕಾರವು ರೈತರನ್ನು ತಪ್ಪುದಾರಿಗೆ ಎಳೆಯುತ್ತಿದ್ದು, ಕಾರ್ಪೊರೇಟ್ ಗೆಳೆಯರಿಗೆ ಅನುಕೂಲ ಮಾಡಿಕೊಡುತ್ತಿದೆ' ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಆರೋಪಿಸಿದ್ದಾರೆ.**